ಮುಗಿದುದರಿಂದ ಅದನ್ನು ಎತ್ತಿ ಬೆನ್ನಿಗೆ ಹಾಕಿಕೊಂಡು, ಕಾಲು ಜೋಡನ್ನು ತೆಗೆದುಕೊಂಡು ರಸ್ತೆ ಸ್ವಲ್ಪ ಒಣಗಿದ್ದರಿಂದ ಅದನ್ನು ಕಾಲಿಗೆ ಹಾಕಿಕೊಂಡು ಚರ್‌ಮರ್ ಎಂದು ಸಪ್ಪಳ ಮಾಡುತ್ತ, ಗೋಕರ್ಣಕ್ಕೆ ಹೊರಟುಹೋದ.

★★★

ಮಾಳಪ್ಪ ಶ್ಯಾನುಭೋಗರು ನಮ್ಮೂರಿಗೂ ಊರ ಸುತ್ತಲಿನ ಎರ್ಡು ಮೂರು ಹಳ್ಳಿಗೂ ಪರಿಚಯವಿದ್ದವರು. ನಮ್ಮ ಊರಿನಲ್ಲಿದ್ದಾಗ ಕೆರೆಮನೆ ದೇವರಾಯರ ಮನೆಯಲ್ಲಿ ಬಾಡಿಗೆಗೆ ಇದ್ದರು. ವೃತ್ತಿಯಿಂದ ಶ್ಯಾನುಭೋಗರಿರುವುದರಿಂದ ಊರಿನಲ್ಲಿ ಎಲ್ಲರಿಗೂ ಬೇಕಾದವರು. ಅವರ ಜಾತಿ ನಿಜವಾಗಿ ಅರಿತವರು ಯಾರೂ ಇಲ್ಲ. ಒಬ್ಬೊಬ್ಬರು ಒಂದೊಂದು ಅನ್ನುತ್ತಿದ್ದರು. 'ಆಚೆ ಸೀಮೆಯ ವಾಣೇರ ಜಾತಿ' ಎಂದು ರಾಯಪ್ಪನೇ ಒಮ್ಮೆ ಸುದ್ದಿ ತಂದುದರಿಂದ ಮಂದಿ ಹಾಗೆ ನಂಬುತ್ತಿದ್ದರು. ವಾಣೇರ ಸೀತಕ್ಕ ಇದನ್ನು ನಂಬಿದ್ದಳೆಂದು ಹೇಳಿದ ಮೇಲೆ ಉಳಿದವರು ನಂಬುವ ಮಾತೇ ಇರಲಿಲ್ಲ. ಯಾರಾದರೂ ನಂಬುವಂತೆಯೇ ಇದ್ದರು ಶ್ಯಾನುಭೋಗರು. ಅವರ ನಿಲುವು, ಅಗಲವಾದ ಎದೆ, ರೂಪ, ಮೈಕಟ್ಟು ಯಾರೂ ಅವರಿಗೆ ಜಾತಿ ಕೇಳದ ಹಾಗೆ ಇದ್ದವು. ಬೆಳ್ಳಗಿನವರೊಂದಿಗೆ ಕಪ್ಪಾಗಿಯೂ, ಕಪ್ಪಗಿನವರೊಂದಿಗೆ ಬೆಳ್ಳಗಾಗಿಯೂ, ಕಾಣುವಂತಹ ಮೈಬಣ್ಣ, ನಯವಾದ ಮೀಸೆ ಇಲ್ಲದ ಮುಖ, ತುಟಿಗಳಲ್ಲಿ ಯಾವಾಗಲೂ 30 ನಂಬರಿನ ಬೀಡಿ. ನಡುವೆ ಬೈತಲೆ ತೆಗೆದು ಗಟ್ಟಿಯಾಗಿ ಹಿಂದೆ ಬಾಚಿಕೊಳ್ಳುವ ಕ್ರಾಪು. ಅಗಲವಾದ ನೆಲದ ತನಕವೂ ಇಳಿದು ಅವರು ಹೋದ ಗುರುತನ್ನು ತೋರಿಸುವ ಪಾಯಜಾಮ, ಉದ್ದ ಕೈಯಿನ ಮೊಣಕಾಲಿನವರೆಗೂ ಇಳಿದ ನೀಲಿ ಬಣ್ಣದ ಶರ್ಟು, ಕೈಯ್ಯಲ್ಲಿ ಮಡಚಿ ಹಿಡಿದ ಚೀಲ ಹಾಗೂ ಲಕೋಟೆಗಳು, ಹಿಂದೆ ಅವರ ನೆರಳಿನ ಹಾಗೆ ಹಿಂಬಾಲಿಸುವ ಉದ್ದ ಕಚ್ಚೆಯ ಉಗ್ರಾಣಿ– ಇವಿಷ್ಟು ಹೇಳಿದರೆ ಇದ್ದಕ್ಕಿದ್ದ ಹಾಗೆ ಹೇಳಿದಂತಾಯಿತು. ಎಷ್ಟು ದೂರದಿಂದಲೂ ಅವರನ್ನು ಗುರುತಿಸಬಹುದಾಗಿತ್ತು. ಸರಕಾರಿ ಕಾಗದಪತ್ರಗಳಲ್ಲಿ ಬದಲಾವಣೆ ಮಾಡುವುದು ಎಷ್ಟು ಬಿಗಿಯೋ ಅಷ್ಟೇ ಬಿಗಿ ಶ್ಯಾನುಭೋಗರ ತೋರಿಕೆ ನಡವಳಿಕೆಯಲ್ಲಿ ಇತ್ತು. ಅವರು ಆಗಲೇ ಮೂರು ತಿಂಗಳ ಮೊದಲು ಮಳೆಗಾಲದ ಪ್ರಾರಂಭದಲ್ಲಿ ಹೊನ್ನಾವರದ ಯಾವುದೋ ಒಂದು ಹಳ್ಳಿಗೆ ವರ್ಗವಾಗಿಹೋಗಿದ್ದರು. ಊರಲ್ಲಿ ಎಷ್ಟು ಶ್ಯಾನುಭೋಗರು ಬಂದು ಹೋದರೋ ಲೆಕ್ಕವಿಲ್ಲ! ಆದರೆ ಈ ಮಾಳಪ್ಪ ಶ್ಯಾನುಭೋಗರು ಮಾತ್ರ ಒಳ್ಳೇ ಛಾಪು ಹಾಕಿ ಹೋಗಿದ್ದರು. ಇನ್ನೊಮ್ಮೆ ಅವರು ಬರುವ ಹಾಗೆ ಮಂದಿಯಲ್ಲಿ ಆಸೆ ಹುಟ್ಟಿಸುವ ಹಾಗೆ ಮಾಡಿಹೋಗಿದ್ದರು. 'ಅಂಥ ಶ್ಯಾನುಭೋಗರೇ ಇಲ್ಲ' ಎಂದು ಆಗಾಗ್ಗೆ ಜನ ಹೇಳುತ್ತಿದ್ದರು. ಬಹಳ ಕಾಲ ಜನರ ನೆನಪಿನಲ್ಲಿ ಇರುವ ಹಾಗೆ ಉಳಿದುಹೋಗಿದ್ದರು ಅವರು. ಒಳ್ಳೆಯ ಸ್ವಭಾವ ಬಹಳ ಥಂಡು, ಪ್ರಾಮಾಣಿಕರು, ಬುದ್ಧಿವಂತರು. 'ರಿಕಾರ್ಡು ಉತಾರು' ತೆಗೆಯುವುದರಲ್ಲಾಗಲೀ, ದಸ್ತೇವಜ ಕಾಗದ ಪತ್ರಗಳಿಗಾಗಲೀ ಯಾರಿಗೂ ಪೀಡಿಸುತ್ತಿದ್ದಿಲ್ಲ. ಊರಲ್ಲಿ ಕಳ್ಳು ಕುಡಿದು ಹೊಡೆದಾಡುವ ಆಗೇರರ 'ಪಂಚಾಯತಿ'ಗೆ, ಕಳುವಾದರೆ ಪಂಚನಾಮೆಗೆ ಕರೆಬಂದರೆ ಕೈಯ್ಯಲ್ಲಿದ್ದ ಕೆಲಸ ಬಿಟ್ಟು ಓಡಿಹೋಗುತ್ತಿದ್ದರು. ಅಲ್ಲದೇ ಆಕಸ್ಮಿಕವಾದ ಮಾಮಲೇದಾರರ ಭೆಟ್ಟಿಗೂ, ಪೊಲೀಸ ಖಾತೆಯ ಅಧಿಕಾರಿಗಳ 'ಪಾರ್ಟಿ'ಗೂ ತಾವೇ ಮುಂದಾಗಿ ಖರ್ಚು ಮಾಡುತ್ತಿದ್ದರು.

ಹಳ್ಳಿಯ 'ಹಿರಿಯ' ಅಧಿಕಾರಿಗಳು ಅವರು. ಇಂಗ್ಲಿಷ ಶಾಲೆಯ ಹೆಡ್‌ಮಾಸ್ತರರು ಇದ್ದರೂ ಅವರು ಸರಕಾರಿ ನೌಕರರಲ್ಲವಲ್ಲ. ಹೀಗಾಗಿ ಶ್ಯಾನುಭೋಗರಿಗೇ ಮಾನ. ಅವರಲ್ಲಿಯೇ ಅಭಿಮಾನ ಮಂದಿಗೆ. ಪ್ರಾಥಮಿಕ ಸಾಲೆಗಳಲ್ಲಿ ಸಭೆ, ವಿವಿಧ ವಿನೋದಾವಳಿಯ ಕಾರ್ಯಕ್ರಮಗಳಲ್ಲಿ, ಊರಿನ